ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in.
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**

ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009

**ಸಂಖ್ಯೆ:ಕವಿಪ್ರನಿನಿ/ಬಿ85/6334/2014-15** **ದಿನಾಂಕ:** 14 MAR 2023

**ಲಗತ್ತು: 01**

**"ಅತೀ ತುರ್ತು"**

ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾ.ಸಂ.)
ಬೆವಿಕಂ/ಹುವಿಸಕಂ/ಮವಿಸಕಂ/ಗುವಿಸಕಂ/ಚಾವಿಸನಿನಿ,
ಬೆಂಗಳೂರು/ಹುಬ್ಬಳ್ಳಿ/ಮಂಗಳೂರು/ಕಲಬುರಗಿ/ಮೈಸೂರು.

ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ,
ಬೆಂಗಳೂರು/ತುಮಕೂರು/ಮೈಸೂರು/ಹಾಸನ/ಬಾಗಲಕೋಟೆ/ಕಲಬುರಗಿ.

ಮುಖ್ಯ ಇಂಜಿನಿಯರ್(ವಿ), ಎಸ್.ಎಲ್.ಡಿ.ಸಿ,
ಕವಿಪ್ರನಿನಿ, ಬೆಂಗಳೂರು.

ಆರ್ಥಿಕ ಸಲಹೆಗಾರರು(ಲೆಕ್ಕಗಳು ಮತ್ತು ಸಂಪನ್ಮೂಲ),
ಕವಿಪ್ರನಿನಿ, ಬೆಂಗಳೂರು.

ಮಾನ್ಯರೇ,

ಉನಿಅ (ಮಾಸಂ-1)
B.S. 14/3/23

**ವಿಷಯ:** ಕವಿಪ್ರನಿನಿಯ ಜಾಲತಾಣದಲ್ಲಿ "ಕವಿಪ್ರನಿನಿ ಹಾಗೂ ವಿಸಕಂಗಳ ಹುದ್ದೆ ಮತ್ತು ಸಿಬ್ಬಂದಿಯ ದತ್ತಾಂಶ" ವನ್ನು ಇಂದೀಕರಿಸುವ ಬಗ್ಗೆ.

**ಉಲ್ಲೇಖ:** ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ5ಎ/18261/2015-16 ದಿನಾಂಕ:13.09.2021

\- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಕವಿಪ್ರನಿನಿ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯವ್ಯಾಪ್ತಿಯ ಕಛೇರಿಗಳ ಹುದ್ದೆ ಹಾಗೂ ಸಿಬ್ಬಂದಿಯ ಮಾಹಿತಿಯನ್ನು ಪಡೆಯಲು ಹಾಗೂ ಸರ್ಕಾರ/ಶಾಸಕಾಂಗ ಸಭೆ/ಮಂಡಳಿಗೆ ವರದಿಗಳನ್ನು ಒದಗಿಸಲು ಆನ್‌ಲೈನ್ ದತ್ತಾಂಶವನ್ನು ರಚಿಸಲಾಗಿದೆ.

ಮುಂದುವರೆದು, ಪ್ರತೀ ವರ್ಷದಂತೆ ಪ್ರಸ್ತುತ ಆರ್ಥಿಕ ವರ್ಷದ ದಿನಾಂಕ:31.03.2023 ರಂತೆ "ಕವಿಪ್ರನಿನಿ ಮತ್ತು ಎಸ್ಕಾಂಗಳ ಹುದ್ದೆ ಹಾಗೂ ಸಿಬ್ಬಂದಿಯ ದತ್ತಾಂಶ" ದಲ್ಲಿ ಈಗಾಗಲೇ ನೀಡಲಾಗಿರುವ ಪಾಸ್‌ವರ್ಡ್ ನೊಂದಿಗೆ **ಸದರಿ ಮಾಹಿತಿಗಳನ್ನು ದಿನಾಂಕ:15.04.2023 ರ ಒಳಗೆ ತಪ್ಪದೇ ನವೀಕರಿಸಿ ದಾಖಲಿಸಲು ಕೋರಿದೆ.**

ಕವಿಪ್ರನಿನಿಯು ಪ್ರತೀ ಆರ್ಥಿಕ ವರ್ಷಾಂತ್ಯಕ್ಕೆ, ಉಲ್ಲೇಖಿತ ಅಧಿಸೂಚನೆಯ ಮೂಲಕ ಕವಿಪ್ರನಿನಿ ಮತ್ತು ವಿಸಕಂಗಳಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ಸಂಖ್ಯೆಗಳನ್ನು ಪ್ರಕಟಿಸಲು ನಿಮ್ಮ ಕಛೇರಿಗಳಿಂದ ಒದಗಿಸುತ್ತಿರುವ ಮಾಹಿತಿಗಳು/ ಸಂಖ್ಯೆಗಳು ಹಾಗೂ ಕವಿಪ್ರನಿನಿಯ ಜಾಲತಾಣದ ಸಿಬ್ಬಂದಿಗಳ ದತ್ತಾಂಶದಲ್ಲಿ ವೇತನ ಬಟವಾಡೆ

ಅಧಿಕಾರಿಗಳು ಇಂದೀಕರಿಸುತ್ತಿರುವ ಹುದ್ದೆಗಳ ಮಾಹಿತಿಗಳು/ ಸಂಖ್ಯೆಗಳು ಹೊಂದಾಣಿಕೆಯಾಗದೇ ಇರುವುದನ್ನು ನಿಗಮವು ಗಂಭೀರವಾಗಿ ಪರಿಗಣಿಸಿದೆ. ಇದರಿಂದಾಗಿ ದತ್ತಾಂಶದಿಂದ ಹುದ್ದೆಗಳ ಮತ್ತು ಸಿಬ್ಬಂದಿಯ ವಿವಿಧ ಮಾಹಿತಿಗಳನ್ನು ಸರ್ಕಾರದ ವಿವಿಧ ಇಲಾಖೆಗಳಿಗೆ, ಆಯೋಗಗಳಿಗೆ, ಸಭೆಗಳಿಗೆ, ವಿಧಾನ ಮಂಡಲದ ಸದಸ್ಯರಿಗೆ ಮತ್ತು ಇತರೆ ಪ್ರಾಧಿಕಾರಗಳಿಗೆ ಸಲ್ಲಿಸುವಾಗ ಕಷ್ಟಕರವಾಗಿರುತ್ತದೆ. ಆದ್ದರಿಂದ ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವ ಹುದ್ದೆಗಳ ಮಾಹಿತಿಗಳು/ ಅಂಕಿ ಅಂಶಗಳು ಹಾಗೂ ಕವಿಪ್ರನಿನಿಯ ಅಂತರ್ಜಾಲದ ಸಿಬ್ಬಂದಿಯ ದತ್ತಾಂಶದಲ್ಲಿ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ನಮೂದಿಸುತ್ತಿರುವ ಮಾಹಿತಿಗಳು/ಅಂಕಿ ಅಂಶಗಳು ಒಂದೇ ಆಗಿರುವಂತೆ ಹಾಗೂ ಹೊಂದಾಣಿಕೆಯಾಗುವಂತೆ ನಿಗಾ ವಹಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸುವಂತೆ ಕೋರಿದೆ.

ಪಾಸ್‌ವರ್ಡ್ ಸಂಬಂಧಿತ ಹಾಗೂ ದತ್ತಾಂಶದಲ್ಲಿ ಮಾಹಿತಿಯನ್ನು ನಮೂದಿಸುವ ತೊಂದರೆಗಳಿಗೆ ಸಂಬಂಧಿಸಿದ ಯಾವುದೇ ಸಂದೇಹ/ಸ್ಪಷ್ಟೀಕರಣದ ವಿಷಯವಾಗಿ ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳು ತಮ್ಮ ಮೊಬೈಲ್ ಸಂಖ್ಯೆಯೊಂದಿಗೆ ಮಿಂಚಂಚೆ ಮೂಲಕ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಉಲ್ಲೇಖಿತ ದತ್ತಾಂಶದಲ್ಲಿ ಮಾಹಿತಿಯನ್ನು ಭರ್ತಿ ಮಾಡಲು ಸೂಚನೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಲಾಗಿದೆ.

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ.,)**
**ಕವಿಪ್ರನಿನಿ**

**ಪ್ರತಿಗಳು:**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ವಿಸಕಂಗಳು/ಪಿಸಿಕೆಎಲ್.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ವಿಸಕಂಗಳು, ಬೆಂಗಳೂರು.
3. ಮುಖ್ಯ ಇಂಜಿನಿಯರ್(ವಿ) ಕವಿಪ್ರನಿನಿ/ ವಿಸಕಂಗಳು.
4. ನಿರ್ದೇಶಕರು(ಹಣಕಾಸು)/(ಪ್ರಸರಣ)/(ಆ. ಮತ್ತು ಮಾ.ಸಂ), ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
5. ಅಧೀಕ್ಷಕ ಇಂಜಿನಿಯರ್(ವಿ), ಐ.ಟಿ, ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
6. ಎಲ್ಲಾ ಅಧೀಕ್ಷಕ ಇಂಜಿನಿಯರ್/ ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ವಿಸಕಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ ವಿಸಕಂಗಳು.
8. ವ್ಯವಸ್ಥಾಪಕರು(ಆಂ.ನಿ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
9. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ/ವಿಸಕಂಗಳು.

**ಸಂಖ್ಯೆ: ಕವಿಪ್ರನಿನಿ/ಬಿ85/6334/2014-15 ದಿನಾಂಕ: 14.03.2023 ರ ಅನುಬಂಧ**

**ಸೂಚನೆಗಳು**

1. ಕವಿಪ್ರನಿನಿಯ ಜಾಲತಾಣ https://kptcl.karnataka.gov.in=>eprasarana ದಲ್ಲಿ ಮಾಹಿತಿಗಳನ್ನು ಇಂದೀಕರಿಸಲು ಸೂಚಿಸಿದೆ.
2. ಸಂಬಂಧಿಸಿದ ಸಂಬಳ ಬಟವಾಡೆ ಅಧಿಕಾರಿಗಳ ಹೆಸರು, ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಸರಿಯಾಗಿ ನಮೂದಿಸತಕ್ಕದ್ದು.
3. ಪ್ರತೀ ನೌಕರರ ಮೂಲ ವೇತನವನ್ನು ದಿನಾಂಕ: 31.03.2023 ರಂತೆ ನಮೂದಿಸಬೇಕು.
4. ಪ್ರತಿಯೊಬ್ಬ ನೌಕರನ ನೇಮಕಾತಿ ಪ್ರಾಧಿಕಾರವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಉದಾಹರಣೆಗೆ,
    i. ಪವರ್ ಮ್ಯಾನ್-ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಮವಿಸಕಂ, ಉಡುಪಿ.
    ii. ಕಿರಿಯ ಸಹಾಯಕ-ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂ, ಬೆಳಗಾವಿ
    iii. ಕಿರಿಯ ಇಂಜಿನಿಯರ್(ವಿ)-ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಗುವಿಸಕಂ, ರಾಯಚೂರು.
    iv. ಕಾರ್ಯನಿರ್ವಾಹಕ ಇಂಜಿನಿಯರ್(ವಿ)-ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ, ಬೆಂಗಳೂರು.
5. ಪ್ರತಿಯೊಬ್ಬ ನೌಕರನ ಪ್ಯಾನ್ ಹಾಗೂ ಆಧಾರ್ ಸಂಖ್ಯೆಯನ್ನು ಪಡೆದು ನಮೂದಿಸಬೇಕು.
6. ಪ್ರತಿಯೊಬ್ಬ ನೌಕರನ ವರ್ಗ, ಜಾತಿ, ಉಪಜಾತಿ ಹಾಗೂ ಧರ್ಮದ ಮಾಹಿತಿಯನ್ನು ಸರಿಯಾಗಿ ನಮೂದಿಸಬೇಕು.
7. ನೌಕರರನ್ನು ಕಂಪನಿಗಳು ನೇಮಿಸಿದ್ದಲ್ಲಿ, ನೌಕರನು ಕವಿಪ್ರನಿನಿ, ಬೆವಿಕಂ, ಮವಿಸಕಂ, ಹುವಿಸಕಂ, ಗುವಿಸಕಂ ಅಥವಾ ಚಾವಿಸನಿನಿ ನೌಕರನೆಂದು ಸ್ಪಷ್ಟವಾಗಿ ನಮೂದಿಸಬೇಕು.
8. ನೌಕರನನ್ನು ನೇರ ನೇಮಕಾತಿ ಅಡಿಯಲ್ಲಿ ನೇಮಕ ಮಾಡಲಾಗಿದ್ದಲ್ಲಿ, ನೌಕರನನ್ನು ಹೈದರಾಬಾದ್ ಕರ್ನಾಟಕ ಮೀಸಲಾತಿಯಡಿಯಲ್ಲಿ ನೇಮಕ ಮಾಡಲಾಗಿದೆಯೇ ಎಂದು ನಮೂದಿಸತಕ್ಕದ್ದು.
9. ಎಲ್ಲಾ ನೌಕರರಿಗೆ ಸಂಬಂಧಿಸಿದಂತೆ, ನೌಕರರು ಹೈ-ಕ ಪ್ರದೇಶಕ್ಕೆ ಸೇರಿದವರಾಗಿದ್ದಾರೆಯೇ ಮತ್ತು ಸೇವಾ ದಾಖಲೆಯ ಪ್ರಕಾರ ಸ್ಥಳೀಯ ವ್ಯಕ್ತಿ ಎಂದು ಪ್ರಮಾಣೀಕರಿಸಲಾಗಿದೆಯೇ? ಅಥವಾ ಸಹಾಯಕ ಆಯುಕ್ತರಿಂದ ಅರ್ಹತಾ ಪ್ರಮಾಣ ಪತ್ರವನ್ನು ಪಡೆಯಲಾಗಿದೆಯೇ? ಎಂದು ಸ್ಪಷ್ಟವಾಗಿ ಸೂಚಿಸತಕ್ಕದ್ದು.
10. ಎಲ್ಲಾ ನೌಕರರ ವಿವರಗಳನ್ನು ನಮೂದಿಸಿ, ಪೂರ್ಣಗೊಳಿಸಿದ ನಂತರ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಯು ಈ ವಿವರಗಳನ್ನು ಮುದ್ರಿಸಿ ವೇತನ ವಿತರಣಾ ಕಛೇರಿಯಲ್ಲಿಯೇ ಉಳಿಸಿಕೊಳ್ಳತಕ್ಕದ್ದು.
11. ಒಂದು **Data entry completion report** ಅನ್ನು ದತ್ತಾಂಶದಲ್ಲಿ ಸೃಜಿಸಿ ಇದನ್ನು ಸಹ ಮುಂದಿನ ದಾಖಲೆಗಾಗಿ ಕಛೇರಿಯಲ್ಲಿಯೇ ಉಳಿಸಿಕೊಳ್ಳತಕ್ಕದ್ದು. ಮುಂದುವರೆದು, **Data entry completion report** ನ ಮೆದು ಪ್ರತಿಯನ್ನು manager.ar.kptcl@gmail.com ಗೆ ಕಳುಹಿಸತಕ್ಕದ್ದು.

***